# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ
## ಕ್ರಿ.ಮಿಸಲೇನಿಯಸ್ ನಂಬರ 69/2017

ಪಿ ಡಬ್ಲ್ಯೂ- 1

ಸಾಕ್ಷಿಯ ಹೆಸರುಃ ಸಾವಿತ್ರಿ
ತಂದೆಯ ಹೆಸರುಃ ವಿನಾಯಕ ನಾಯ್ಕ
ವಯಸ್ಸುಃ 35 ವರ್ಷ
ಉದ್ಯೋಗಃ ಮನೆಕೆಲಸ
ವಿಳಾಸಃ ಕೃಷ್ಣಾಪುರ, ಅಂಕೋಲಾ

**ಪ್ರಮಾಣ ವಚನ ಭೋದಿಸಿದ ದಿನಾಂಕಃ 21-03-2022**

**ಮುಖ್ಯ ವಿಚಾರಣೆಃ ಶ್ರೀ. ವಿ.ವಿ.ಎಸ್. ವಕೀಲರಿಂದ**

16-05-2016 ರಲ್ಲಿ ನನ್ನ ವಿವಾಹವು ಕುಂದೋಡರಿ ದೇವಸ್ಥಾನ, ಅಂಕೋಲಾದಲ್ಲಿ ಎದುರುದಾರರ ಜೊತೆಗೆ ನೆರವೇರಿರುತ್ತದೆ. ನಮ್ಮ ವಿವಾಹವು ಹಿಂದೂ ಸಂಪ್ರದಾಯದಂತೆ ನೇರವೇರಿರುತ್ತದೆ. ನನಗೆ 3 ಜನ ಸಹೋದರರು ಮತ್ತು 3 ಜನ ಸಹೋದರಿಯರು ಇರುತ್ತಾರೆ. ನಾನು ಕೊನೆಯವಳು. ನಾನು ಬಿ.ಎ. ವ್ಯಾಸಾಂಗ ಮಾಡಿದ್ದೇನೆ. ನನ್ನ ವಿವಾಹವು ಗುರುಹಿರಿಯರ ನಿಶ್ಚಯದಂತೆ ನೇರವೇರಿರುತ್ತದೆ. ವಿವಾಹ ಸಂಧರ್ಭದಲ್ಲಿ ಎದುರುದಾರರಿಗೆ 2 ಲಕ್ಷ ರೂ.ಗಳನ್ನು ವರದಕ್ಷಿಣೆ, ಒಂದು ಬಂಗಾರದ ಚೈನ್, ಒಂದು ಬಂಗಾರದ ಉಂಗುರ ಮತ್ತು ಒಂದು ಬ್ರಾಸ್ಲೈಟ್ ನ್ನು ಎದುರುದಾರರಿಗೆ ನೀಡಿದ್ದೇನೆ.

2. ವಿವಾಹವಾದ ನಂತರ ಕೃಷ್ಣಾಪುರದಲ್ಲಿರುವ ನನ್ನ ಗಂಡನ ಮನೆಗೆ ಹೋದೆ. ಸ್ವಲ್ಪ ದಿವಸ ನಾವು ಚೆನ್ನಾಗಿ ಇದ್ದೇವು. ಎದುರುದಾರರು ನನ್ನ ಜೊತೆ ಜಾಸ್ತಿ ಮಾತನಾಡುತ್ತಿರಲಿಲ್ಲ. ಅವರು ಎಲ್.ಐ.ಸಿ. ಎಜೆಂಟ್ ಇದ್ದಾರೆ. ಗಂಡನ ಮನೆಯಲ್ಲಿ ನನ್ನ ಅತ್ತೆ, ನಾದಿನಿ ಇದ್ದರು. ನನ್ನ ನಾದಿನಿ ಮಂಗಳಾ ಚುಡಿಯಾ ನಾಯ್ಕರವರು ನನಗೆ

ಬಹಳ ಕಿರುಕುಳ ನೀಡುತ್ತಿದ್ದರು. ನನ್ನ ಅತ್ತೆ 03-07-2016 ರಂದು ಮೃತಪಟ್ಟಿರುತ್ತಾರೆ. ನಂತರ ನನ್ನ ನಾದಿನಿ ನನಗೆ ಜಾಸ್ತಿ ಕಿರುಕುಳ ಕೊಡಲು ಪ್ರಾರಂಭ ಮಾಡಿದ್ದು ಇನ್ನೂ ವರದಕ್ಷಿಣೆ ಕೊಡುವಂತೆ ನನಗೆ ಒತ್ತಾಯಿಸಿರುತ್ತಾರೆ. ನನ್ನ ಗಂಡ ಕೂಡ ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಮನೆಯಲ್ಲಿ ನನಗೆ ಏನೇನೂ ಕೊಡುತ್ತಿರಲಿಲ್ಲ ನಾನು ನನ್ನ ತಾಯಿ ಮನೆಯಿಂದ ತಂದು ಜೀವನ ಮಾಡುತ್ತಿದ್ದೆ. ನನ್ನ ತಾಯಿ ಮನೆಯವರು ಹಿರಿಯರನ್ನು ಕರೆಯಿಸಿ ನನ್ನ ಗಂಡ ಮತ್ತು ಅವರ ಕುಟುಂಬದವರೊಂದಿಗೆ ಮಾತುಕತೆ ಮಾಡಿರುತ್ತಾರೆ. ಸದರಿ ಮಾತುಕತೆಗೆ ಅವರು ಸಹಕರಿಸಲಿಲ್ಲ. ಹಳೆಯ ಚಾಡಿಯನ್ನು ಮುಂದುವರೆಸಿರುತ್ತಾರೆ.

3. ನನಗೆ ಸರಿಯಾಗಿ ಊಟ ನೀಡುತ್ತಿರಲಿಲ್ಲ. 01-07-2017 ರಂದು ನನ್ನ ಗಂಡ ಮತ್ತು ಮೂವರು ನಾದಿನಿಯರು ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ನಾನು ನನ್ನ ತಾಯಿ ಮನೆಗೆ ಬಂದೆ. ಅವರು ಮುಂದೆ ಸರಿಹೋಗಬಹುದು ಎಂದು ಉದ್ದೇಶದಿಂದ ನಾನು ಪೊಲೀಸ್ ದೂರು ನೀಡಿರುವುದಿಲ್ಲ. 2017 ರಿಂದ ನಾನು ನನ್ನ ತಾಯಿ ಮನೆಯಲ್ಲಿ ಇದ್ದೇನೆ. ಇಲ್ಲಿಯವರೆಗೂ ನನ್ನ ಗಂಡ ಮತ್ತು ನಾದಿನಿಯರು ನನ್ನನ್ನು ಕರೆದಿರುವುದಿಲ್ಲ.

4. ನನ್ನ ಗಂಡ ಎಲ್.ಐ.ಸಿ. ಎಜೆಂಟ್ ಇದ್ದು, ಅವರಿಗೆ ಒಂದು ತಿಂಗಳಿಗೆ 50,000/- ರೂ. ಆದಾಯ ಇರುತ್ತದೆ. ಮತ್ತು ಸ್ವಂತ ಮನೆ, ಜಮೀನುಗಳು ಇದೆ. ಈ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಜಮೀನುಗಳಲ್ಲಿ ತೆಂಗು, ಬಾಳೆ, ಮಲ್ಲಿಗೆ ಹೂವು, ಮಾವು ಬೆಳೆಯುತ್ತಿದ್ದು, ತಿಂಗಳಿಗೆ ಸುಮಾರು 20,000/- ರೂ. ಆದಾಯ ಬರುತ್ತದೆ. ನನಗೆ ಯಾವುದೇ ಆದಾಯ ಇರುವುದಿಲ್ಲ. ನನ್ನ ತಾಯಿ ನನ್ನನ್ನು ನೋಡಿಕೊಳ್ಳುತ್ತಾರೆ. ಆದ್ದರಿಂದ ನಾನು ಕೋರಿರುವಂತೆ ತಿಂಗಳಿಗೆ 15,000/- ರೂ. ಜೀವನಾಂಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

5. ನನ್ನ ಮದುವೆ ಸಮಯದಲ್ಲಿ ತೆಗೆದ ಕಲರ್ ಫೋಟೋ ಮತ್ತು ಸಿ.ಡಿ.ಯನ್ನು ಹಾಜರುಪಡಿಸಿದ್ದೇನೆ. ಫೋಟೋವನ್ನು ನಿಪಿ-1 ರಿಂದ 3 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಪಿ-4 ಎಂದು ಗುರುತಿಸಲಾಯಿತು. ನನ್ನ ಮಾವನವರ ಹೆಸರಿಗೆ ಇರುವ

ಸ್ವತ್ತಿಗೆ ಸಂಬಂಧಿಸಿದ ಪಹಣಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ-5 ರಿಂದ 10 ಎಂದು ಗುರುತಿಸಲಾಯಿತು. ನಮ್ಮ ವಿವಾಹದ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ- 11 ಎಂದು ಗುರುತಿಸಲಾಯಿತು.

**(ಶ್ರಿ. ಡಿ.ಎನ್.ಎನ್. ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಪಾಟಿ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

**ಜೆ ಎಂ ಎಫ ಸಿ, ಅಂಕೋಲಾ.**